5. ಇಲಾಖಾ ಮುಖ್ಯಸ್ಥರ ವೃಂದದಲ್ಲಿ – ಪ್ರಸ್ತುತ ಯಾವ ಅಧಿಕಾರಿಯು ಸ್ಥಳ ನಿರೀಕ್ಷಣೆಯಲ್ಲಿರುವುದಿಲ್ಲ.

ಆ) ಆಡಳಿತಾತ್ಮಕ ಕಾರಣಗಳು

ಇ) ಶ್ರೀ ಮಹಮ್ಮದ್ ಸಲಾವುದ್ದೀನ್ : ಐ.ಎ.ಎಸ್, ಇವರ ವೇತನ ರೂ. 28,080/– + ಜಿ.ಪಿ. ರೂ. 6600/– = ಒಟ್ಟು ರೂ. 34,680/– ಮತ್ತು ಅರ್ಹ ಭತ್ಯೆಗಳು

ಶ್ರೀ ಎಸ್. ನಾಗರಾಜು, ಐ.ಎ.ಎಸ್. ಇವರ ವೇತನ ರೂ. 28,080/– + ಜಿ.ಪಿ. ರೂ. 6600/– ಒಟ್ಟು ರೂ. 34,680/– ಮತ್ತು ಅರ್ಹ ಭತ್ಯೆಗಳು

ಶ್ರೀ ಎಸ್. ಶೇಖರ್, ಐ.ಎಫ್.ಎಸ್. ಇವರ ವೇತನ ರೂ. 48,080/– + 8900/– (ಗ್ರೇಡ್ ಪೇ) + 650/– (ಎಫ್‌ಪಿಎ) ಆಗಿರುತ್ತದೆ.

ಈ) ಸ್ಥಳ ನಿರೀಕ್ಷೆಯಲ್ಲಿರುವ ಐ.ಎ.ಎಸ್. ಅಧಿಕಾರಯವರಗೆ ಸೂಕ್ತ ಸ್ಥಳ ನಿಯುಕ್ತಿ ನೀಡಲು ಪರೀಶೀಲಿಸಲಾಗುತ್ತಿದೆ.

ಸ್ಥಳ ನಿರೀಕ್ಷೆಣೆಯಲ್ಲಿರುವ ಎ.ಎಫ್.ಎಸ್. ಅಧಿಕಾರಿಯವರಿಗೆ ಸ್ಥಳ ನಿಯುಕ್ತಿ ನೀಡಲು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಂದ ಪ್ರಸ್ತಾವನೆಯನ್ನು ಕೋರಲಾಗಿದೆ.

ಶ್ರೀ ಬಿ.ಎನ್. ವಿಜಯಕುಮಾರ್ : ಮಾನ್ಯ ಮುಖ್ಯಮಂತ್ರಿಗಳು ಉತ್ತರ ಒದಗಿಸಿದ್ದಾರೆ ಅದು ಸರಿಯಾಗಿದೆ ಎಂದು ಭಾವಿಸುತ್ತೇನೆ.

ಶಾಶ್ವತ ನೀರು ಪೂರೈಕೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 22 (682)

ಶ್ರೀ ಚಿಕ್ಕನಗೌಡ್ರು ಸಿದ್ದನಗೌಡ ಈಶ್ವರಗೌಡ (ಕುಂದಗೋಳ):

ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.

ಅ) ಹುಬ್ಬಳ್ಳಿಯಿಂದ ಕುಂದಗೋಳ ಪಟ್ಟಣಕ್ಕೆ ಕುಡಿಯುವ ನೀರಿನ ಪೈಪ್ ಲೈನ್ ಹಾದು ಹೋಗಿದ್ದು, ಇದರ ಮಧ್ಯದಲ್ಲಿ ಬರುವ ನಾಲ್ಕು ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಗ್ರಾಮಗಳಿಗೆ ಕುಡಿಯುವ ನೀರಿನ ತೊಂದರೆ ನಿವಾರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಇ) ಹುಬ್ಬಳ್ಳಿಯಿಂದ ಕುಂದಗೋಳ ಪಟ್ಟಣಕ್ಕೆ ಹಾಯ್ದು ಹೋಗಿರುವ ಕುಡಿಯುವ ನೀರಿನ ಪೈಪ್ ಲೈನ್‌ನಿಂದ ಮಧ್ಯದಲ್ಲಿ ಬರುವ ಕೋಟಗೊಂಡಹುಣಸಿ, ಅದರಗುಂಜಿ, ನೂಲ್ವಿ, ಶೆರೇವಾಡ ಈ ನಾಲ್ಕು ಗ್ರಾಮಗಳಿಗೆ ನೀರು ಪೂರೈಸಲು ಇರುವ ತೊಂದರೆ ಏನು;

ಈ) ಹಾಗಿದ್ದಲ್ಲಿ, ಯಾವಾಗ ಕುಡಿಯುವ ನೀರನ್ನು ಪೂರೈಸಲಾಗುವುದು. ಕುಡಿಯುವ ನೀರು ಪೂರೈಸಲು ಸರ್ಕಾರಕ್ಕಿರುವ ತೊಂದರೆಯೇನು ?

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು):

ಅ) ಬಂದಿದೆ.

ಆ) ಸದರಿ ಗ್ರಾಮಗಳಿಗೆ ಕೊಳವೆ ಬಾವಿಗಳ ಮೂಲಕ ಗ್ರಾಮ ಪಂಚಾಯಿತಿ ವತಿಯಿಂದ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ.

ಇ) ಸದರಿ ನಾಲ್ಕು ಗ್ರಾಮಗಳಿಗೆ ಹುಬ್ಬಳ್ಳಿ – ಧಾರವಾಡ ಮಹಾನಗರ ನೀರಸಾಗರ ನೀರು ಸರಬರಾಜು ಯೋಜನೆಯಿಂದ ನೀರು ಪೂರೈಸಿದಲ್ಲಿ ಹುಬ್ಬಳ್ಳಿ – ಧಾರವಾಡ ಮಹಾನಗರದ ಜನರಿಗೆ ನೀರು ಸರಬರಾಜು ಆಗುವ ಪ್ರಮಾಣದಲ್ಲಿ ಕಡಿತವಾಗುವುದು. ಕುಂದಗೋಳ ನೀರು ಸರಬರಾಜು ಯೋಜನೆಯ ಹಾಲಿ ಕೊಳವೆ ಮಾರ್ಗವು ಕುಂದಗೋಳ ಪಟ್ಟಣದ ನೀರಿನ ಬೇಡಿಕೆಯನ್ನು ಪೂರೈಸುವ ಸಾಮರ್ಥ್ಯವನ್ನು ಮಾತ್ರ ಹೊಂದಿದ್ದು ನಾಲ್ಕು ಗ್ರಾಮಗಳಿಗೆ ಸದರಿ ಕೊಳವೆ ಮಾರ್ಗದಿಂದ ನೀರು ಪೂರೈಸಿದಲ್ಲಿ

ಕುಂದಗೋಳ ಪಟ್ಟಣದ ಜನರಿಗೆ ಸರಬರಾಜು ಆಗುವ ನೀರಿನ ಪ್ರಮಾಣದಲ್ಲಿ ಕಡಿತವಾಗುವುದು.

ಈ) ಸದರಿ ಹಳ್ಳಿಗಳಿಗೆ ಕೊಳವೆ ಮಾರ್ಗಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ಕಾರ್ಯಗತಗೊಳಿಸಬೇಕಾಗಿರುತ್ತದೆ.

ಶ್ರೀ ಚಿಕ್ಕನಗೌಡ್ರು ಸಿದ್ದನಗೌಡ ಈಶ್ವರಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ನನ್ನ ಹಳೆಯ ಕ್ಷೇತ್ರ ಕಲಘಟಗಿ ಕ್ಷೇತ್ರ. ಆ ಕ್ಷೇತ್ರದಿಂದ ಹುಬ್ಬಳ್ಳಿ ತಾಲ್ಲೂಕಿನಲ್ಲಿ ಬರತಕ್ಕಂಥ ನಾಲ್ಕು ಗ್ರಾಮಗಳು ಕೇವಲ 20 ಕಿ.ಮೀ. ಒಳಗೆ ಬರತಕ್ಕಂಥ ಹಳ್ಳಿಗಳು. ಅಂದರೆ ಕುಂದಗೋಳಕ್ಕೆ ಸುಮಾರು 30 ಕಿ.ಮೀ. ಅಂತರದಲ್ಲಿ ಅದರಗುಂಚಿ, ನೂಲ್ವಿ, ಶೆರೇವಾಡ ಗ್ರಾಮಗಳಿವೆ. ನಾನು ಮಾನ್ಯ ಸಚಿವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಮಲಪ್ರಭಾದಿಂದ ಬರುವ ನೀರನ್ನು ಹುಬ್ಬಳ್ಳಿ–ಧಾರವಾಡ ಮಹಾನಗರಕ್ಕೆ ಮಧ್ಯದಲ್ಲಿ ಬರುವ 20–30 ಗ್ರಾಮಗಳಿಗೆ ಶಾಶ್ವತವಾದ ಕುಡಿಯುವ ನೀರನ್ನು ಕೊಡುತ್ತಿದ್ದಾರೆ. ರಾಜನಮಠದಲ್ಲಿರುವ ಒಂದು ಕೆರೆಯಿಂದ ದಯಮಾಡಿ ಆ ನಾಲ್ಕು ಗ್ರಾಮಗಳಿಗೆ ಶಾಶ್ವತವಾದ ಕುಡಿಯುವ ನೀರನ್ನು ಕೊಡಬೇಕೆಂದು ತಮ್ಮ ಮೂಲಕ ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸದಸ್ಯರಾದ ಚಿಕ್ಕನಗೌಡ್ರು ಮಾರ್ಗದ ಮಧ್ಯದಲ್ಲಿ ಬರುವ ಕೋಟನಗೊಂಡಹುಣಸಿ, ಅದರಗುಂಚಿ, ನೂಲ್ವಿ, ಶೆರೇವಾಡ ಈ ನಾಲ್ಕು ಗ್ರಾಮಗಳಿಗೆ ನೀರು ಕೊಡಬೇಕೆಂದು ಪ್ರಶ್ನೆ ಕೇಳಿದ್ದಾರೆ. ಇದರ ಒಂದು feasibility ಯನ್ನು ನೋಡಲಿಕ್ಕಾಗಿ ಈಗಾಗಲೇ ಈ ಕುರಿತು ನಮ್ಮ ಜಲಮಂಡಳಿಯವರು ಮಾನ್ಯ ಶಾಸಕರ ಜೊತೆ ಮೊನ್ನೆ 18ನೇ ತಾರೀಖಿನಂದು ಒಂದು ಸಭೆ ಮಾಡಿದ್ದಾರೆ. ನಾಲ್ಕು ಗ್ರಾಮಗಳಿಗೆ ನೀರು ಕೊಡುವಾಗ ಏನೇನು ಪರಿಣಾಮವಾಗಬಹುದು. ಹುಬ್ಬಳ್ಳಿ–ಧಾರವಾಡ ನಗರಕ್ಕೆ ಇವತ್ತಿನ ಪರಿಸ್ಥಿತಿಗೆ ನೀರು ಕೊಡುವುದರ ಬಗ್ಗೆ ನಾವು ಯೋಜನೆ ಮಾಡಿ ಜೊತೆಗೆ

ಗ್ರಾಮೀಣಾಭಿವೃದ್ಧಿ ಇಲಾಖೆಯವರ ಜೊತೆಗೂ ಕೂಡ ನಾವು ಸಮಾಲೋಚಿಸಬೇಕಾಗಿದೆ. ಏಕೆಂದರೆ ಅದು ಅವರ ಜವಾಬ್ದಾರಿ, ನಾವು ಯೋಜನೆಯನ್ನು ತಯಾರಿಸಿ ನೀರು ಕೊಡಲಿಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕು ಪರಿಶೀಲಿಸುತ್ತೇವೆ.

ಶ್ರೀ ಚಿಕ್ಕನಗೌಡ್ರು ಸಿದ್ದನಗೌಡ ಈಶ್ವರಗೌಡ : ಮಾನ್ಯ ಸಚಿವರು ಹೇಳುತ್ತಿದ್ದಾರೆ. ನಾನು ಸ್ವಾಗತಿಸುತ್ತಿದ್ದೇನೆ. ಮಾನ್ಯ ಮಾಜಿ ಗ್ರಾಮೀಣಾಭಿವೃದ್ಧಿ ಸಚಿವರು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ. ಅವರು ಕೊಟ್ಟಿರುವ ಮಾಹಿತಿ ಏನೆಂದರೆ, ಹುಬ್ಬಳ್ಳಿ – ಧಾರವಾಡ ಮಹಾನಗರಕ್ಕೆ ನೀರು ಸರಬರಾಜು ಎಂದು ಅವರು ಕೊಟ್ಟಿರುತ್ತಾರೆ. ಹುಬ್ಬಳ್ಳಿ – ಧಾರವಾಡ ಮಹಾನಗರಕ್ಕೆ ನೀರು ಸರಬರಾಜು ಮಾಡುವಂಥದ್ದು ಮಲಪ್ರಭಾದಿಂದ. ಆದರೆ ಈ ನೀರು ಸಾಗರ ಕೆರೆ ಏನಿದೆ ಇದರಿಂದ ಕುಂದಗೋಳಕ್ಕೆ ಮಾತ್ರ ಸರಬರಾಜು ಮಾಡುತ್ತಿದ್ದಾರೆ. ಅದಕ್ಕೆ ನಾನು ಏನು ವಿನಂತಿ ಮಾಡಿಕೊಳ್ಳುತ್ತಿದ್ದೇನೆಂದರೆ, ಹುಬ್ಬಳ್ಳಿ – ಧಾರವಾಡ ಮಹಾನಗರಕ್ಕೆ ನೀರು ಸರಬರಾಜು ಮಾಡುವುದರಲ್ಲಿ ನಮಗೆ ಒಂದು ಸೆರೆ ನೀರು ಕೊಡುವ ಅವಶ್ಯಕತೆಯೂ ಇಲ್ಲ, ನಾನು ಅದನ್ನು ಕೇಳುತ್ತಿಲ್ಲ. ನೀರುಸಾಗರದ ನೀರು ಕುಂದಗೋಳ ಪಟ್ಟಣಕ್ಕೆ ಹೋಗುತ್ತಿದೆ, ಈ ಕುಂದಗೋಳ ಪಟ್ಟಣಕ್ಕೆ ಹೋಗುವ ನೀರನ್ನು ಕೊಡಿ ಎಂದು ನಾನು ಕೇಳುತ್ತಿದ್ದೇನೆ. ಕುಂದಗೋಳಕ್ಕೆ ನೀರು ಸರಬರಾಜು ಮಾಡುವಂಥ ಕೆರೆ ಏನಿದೆ ಇನ್ನೊಂದೆರಡು ವರ್ಷ ಮಳೆಯಾಗದಿದ್ದರೂ. ಆ ಕೆರೆಯಲ್ಲಿ ನೀರು ಇರುತ್ತದೆ. ಆ ಕೆರೆಯೊಳಗೆ ಸಾಕಷ್ಟು ನೀರು ಇದೆ. ಆ ನೀರನ್ನು ಈ ಗ್ರಾಮಗಳಿಗೆ ಕೊಡಿ ಎಂದು ನಾನು ಕೇಳುತ್ತಿದ್ದೇನೆ. ಆದರೆ, ಕುಂದಗೋಳ ಪಟ್ಟಣಕ್ಕೆ ನೀರು ಕೊರತೆ ಮಾಡಿ ಅಭಾವ ಮಾಡಿ ನಮಗೆ ನೀರು ಕೊಡಿ ಎಂದು ಕೇಳುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಈ ವಿಚಾರ ಗೊತ್ತಿದೆ. ಇಡೀ ಧಾರವಾಡ ಜಿಲ್ಲೆಯಲ್ಲಿರತಕ್ಕಂಥ ಕುಂದಗೋಳ ಮತಕ್ಷೇತ್ರ 18 ಹಳ್ಳಿಗಳಿಗೆ ಶಾಶ್ವತವಾದ ಕುಡಿಯುವ ನೀರಿನ ಯೋಜನೆಗೆ ಅನುಮೋದನೆ ತೊಟ್ಟಿದ್ದಾರೆ. ಈಗಾಗಲೇ ಮುನ್ಸಿಪಾಲಿಟಿಯವರು ಆ ಹಳ್ಳಿಗಳಿಗೆ ನೀರು ಸರಬರಾಜು ಮಾಡುತ್ತಿದ್ದಾರೆ. ನಾನು ಇದನ್ನು ಸ್ವಾಗತಿಸುತ್ತೇನೆ. ಆದರೆ ಈ ನಾಲ್ಕು ಗ್ರಾಮಗಳಿಗೆ ನೀರು

ಒದಗಿಸಲು ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಸ್ಥಳೀಯರಾಗಿದ್ದಾರೆ. ಮೂಲಭೂತ ಸೌಕರ್ಯಗಳ ಸಚಿವರು ಇವರು ಕುಳಿತುಕೊಂಡು ಮಾತನಾಡಿಕೊಂಡು ತಕ್ಷಣ ಅನುಮತಿಯನ್ನು ಕೊಡಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಮಾನ್ಯ ಸಚಿವರಿಗೆ ಕೇಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ತಿಳಿಸಿದ ಪ್ರಕಾರ ಆ ನಾಲ್ಕು ಗ್ರಾಮಗಳಿಗೆ ಕುಡಿಯುವ ನೀರನ್ನು ಕೊಡುವುದಕ್ಕೋಸ್ಕರ ನಮಗೆ ಸುಮಾರು 2.5 ಎಂ.ಎಲ್.ಡಿ. ನೀರು ಬೇಕಾಗುತ್ತದೆ. ಅಲ್ಲಿಗೆ ನೀರು ಕೊಡುವುದರ ಬಗ್ಗೆ ಸನ್ಮಾನ್ಯ ಸದಸ್ಯರ ಆಗ್ರಹ ಏನಿದೆ ಅದರಂತೆಯೇ ನಾವು ಖಂಡಿತ ಪರಿಶೀಲನೆ ಮಾಡುತ್ತೇವೆ.

ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ್ರ ಈಶ್ವರಗೌಡ : ಅದು ಯಾವಾಗ ಬರುತ್ತದೆಂಬುದನ್ನು ಸನ್ಮಾನ್ಯ ಸಚಿವರು ದಯಮಾಡಿ ಹೇಳಬೇಕು. ಏಕೆಂದರೆ ಇವತ್ತಿನ ದಿವಸ ಅಲ್ಲಿ ಸುಮಾರು 300 ರಿಂದ 500 ಮೀಟರ್‌ವರೆಗೆ ಬೋರ್‌ವೆಲ್ ಕೊರೆಸಿದರೂ ನೀರು ಬರುತ್ತಿಲ್ಲ. ಬೋರ್‌ನಲ್ಲಿ ನೀರು ಇರುವ ಕಡೆ ಅಂದರೆ, ಸುಮಾರು 15 ರಿಂದ 20 ಕಿ.ಮೀ. ದೂರದವರೆಗೆ ಹೋಗಿ ನೀರು ತರುವಂಥ ಸ್ಥಿತಿ ಇವತ್ತಿನ ದಿವಸ ಇದೆ. ಆದ್ದರಿಂದ, ಯಾವಾಗ ಕೊಡುತ್ತಾರೆಂಬುದನ್ನು ದಯಮಾಡಿ ಹೇಳಬೇಕು.

ಅಧ್ಯಕ್ಷರು : ಆದಷ್ಟು ಶೀಘ್ರವಾಗಿ ಮಾಡುತ್ತೇನೆಂದು ಮಾನ್ಯ ಸಚಿವರು ಈಗಾಗಲೇ ಹೇಳಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಕಳೆದ ವಾರ ಸನ್ಮಾನ್ಯ ಸದಸ್ಯರು ಇದರ ಬಗ್ಗೆ ಸಭೆ ಮಾಡಿದ್ದಾರೆ. ಆದ್ದರಿಂದ, ಅದರ ಬಗ್ಗೆ ನಾವು workout ಮಾಡುತ್ತಿದ್ದು. ಯಾವಾಗ ನೀರು ಕೊಡುತ್ತೇವೆಂಬುದನ್ನು ನಾವು ಅವರಿಗೆ ತಿಳಿಸುತ್ತೇವೆ.

ಅಧ್ಯಕ್ಷರು : ಆಯಿತು.